**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಸ್ಪೆಷಲ್ ಕೇಸ್ ನಂಃ- 46/15**

(ಪ್ರಾ.ಸಾ.-5 ಚಾ.ಸಾ.-13)

ತಾಃ 13-08-2018 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು ಃ ಮುನಿನಾರಾಯಣ

ತಂದೆಯ ಹೆಸರು ಃ ಲೇಟ್ ತಿರುಮಲಪ್ಪ

ವಯಸ್ಸು ಃ 66 ವರ್ಷ

ಉದ್ಯೋಗ ಃ ನಿವೃತ್ತ ಎ ಎಸ್ ಐ

ವಾಸ ಸ್ಥಳ ಃ ಹೊಸಕೋಟೆ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2002 ರಿಂದ 2010ರವರೆಗೆ ಎ ಎಸ್ ಐ ಆಗಿ ನಂದಗುಡಿ ಪೋಲೀಸ್ ಠಾಣೆಯಲ್ಲಿ ಕೆಲಸ ಮಾಡಿದ್ದೇನೆ.

ದಿನಾಂಕ 16-06-2004 ರಂದು ನಾನು ಠಾಣಾ ಎಸ್ ಹೆಚ್ ಓ ಕರ್ತವ್ಯದ ಮೇಲಿದ್ದಾಗ ಬೆಳಗ್ಗೆ 11-45 ಗಂಟೆಗೆ ಈ ಕೇಸಿನ ಪಿರ್ಯಾದಿ ಪ್ರಾಸಾ -1 ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಅದನ್ನು ಠಾಣಾ ಗುನ್ನಾ ನಂ.83/2004 ಕ್ಕೆ ಕಲಂ 379 ಐ.ಪಿ.ಸಿ ಅಡಿ ದಾಖಲಿಸಿಕೊಂಡು ಎಫ್.ಐ.ಆರ್ ತಯಾರಿಸಿ ಮೂಲ ದೂರು ಮತ್ತು ಎಫ್.ಐ.ಆರ್‌ನ್ನು ನ್ಯಾಯಾಲಯಕ್ಕೆ ಕಳುಹಿಸಿ ಪ್ರತಿಗಳನ್ನು ಮೇಲಧಿಕಾರಿಗಳಿಗೆ ಕಳುಹಿಸಿದೆನು.

ಈಗ ನನಗೆ ತೋರಿಸುತ್ತಿರುವ ನಿಪಿ-1 ದೂರು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ನಿಪಿ-1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸುತ್ತಿರುವ ಕಡತದಲ್ಲಿನ ಮೂಲ ಎಫ್.ಐ.ಆರ್ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ 5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

ದಿನಾಂಕ 17-06-2004 ರಂದು ಕೃತ್ಯ ನಡೆದ ಸ್ಥಳ ಎಡಕನಹಳ್ಳಿ ಗ್ರಾಮಕ್ಕೆ ಹೋಗಿ ಮುನಿರಾಜುರವರ ತೋಟದ ಜಮೀನಿನಲ್ಲಿ ಪಂಚರ ಸಮಕ್ಷಮ ಪ್ರಾಸಾ- 1 ತೋರಿಸಿದ ಸ್ಥಳದಲ್ಲಿ ನಿಪಿ-2 ರಂತೆ ಮಹಜರ್ ಜರುಗಿಸಿದೆನು.

ಈಗ ನನಗೆ ತೋರಿಸುತ್ತಿರುವ ನಿಪಿ-2 ಮಹಜರ್‌ನಲ್ಲಿ ನನ್ನ ಸಹಿ ಇದೆ. ನಿಪಿ 2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

ತದ ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಪಿ ಎಸ್ ಐ ರವರಿಗೆ ಒಪ್ಪಿಸಿದೆನು.

**ಪಾಟೀ ಸವಾಲುಃ ಆರೋಪಿತರ ಪರ ಎನ್ ಎ ವಕೀಲರಿಂದ ಃ**

ಸದರಿ ಪ್ರಕರಣದಲ್ಲಿ ಪ್ರಾಸಾ-1 ಠಾಣೆಗೆ ಹಾಜರಾಗಿ ನಿ.ಪಿ-1 ರಲ್ಲಿ ಕಾಣಿಸಿದಂತೆ ಲಿಖಿತ ದೂರು ಸಲ್ಲಿಸಿರುವುದೇ ಇಲ್ಲ ಎಂದರೆ ಸರಿಯಲ್ಲ.

ನಿಪಿ-2 ರಲ್ಲಿ ಕಾಣಿಸಿದಂತೆ ಸ್ಥಾನಿಕವಾಗಿ ಹಾಗೂ ವಾಸ್ತವಿಕವಾಗಿ ಪಂಚರ ಸಮಕ್ಷಮ ಸ್ಥಳ ಮಹಜರ್ ಜರುಗಿಸಿರುವುದೇ ಇಲ್ಲ ಎಂದರೆ ಸರಿಯಲ್ಲ.

ನಿಪಿ-1 ಕ್ಕೆ ಪ್ರಾಸಾ-1ವಿನ ಸಹಿ ಪಡೆದುಕೊಂಡು ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ದೂರನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ಪ್ರಕರಣಕ್ಕೆ ಅನುಕೂಲ ಆಗುವ ಹಾಗೆ ಠಾಣೆಯಲ್ಲೇ ಕುಳಿತು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.